ELECTRIFICATION OF VILLAGES IN ARSIKERE TALUK

102. SRI H. S. SIDDAPPA (Arsikere).— Will the Minister for Public Works and Electricity be pleased to state ;—

(*a*) the number of villages included for Rural Electrification in Arsikere Taluk in the III list. (List of villages may please be provided) ;

(*b*) what are the sub-transmission lines proposed to be drawn in Arsikere Taluk and when these would be approved by the Government ;

(*c*) the names of the villages that would be taken up for electrification after drawing these S. T. lines and by what time these would be electrified ?

SRI H. M. CHANNABASAPPA. -(Minister for Public Works and Electricity.)

(*a*) 15 Villages-*vide* Statement I placed on the Table of the House.*

(*b*) *vide* Statement II placed on the Table of the House. The Board has already been asked to take up the scheme*.

(*c*) 50 Villages as indicated in Statement III placed on the Table of the House.* The question of electrification of the villages depends on availability of funds.

ಶ್ರೀ ಎಚ್. ಎಸ್. ಸಿದ್ಧಪ್ಪ.—ತಾವು ನನ್ನ (ಅ) ಪ್ರಶ್ನೆಗೆ ಉತ್ತರವಾಗಿ, 15 ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡಲು ಉದ್ದೇಶಿಸಿದೆ ಎಂದು ಹೇಳಿದ್ದೀರಿ. ಆ ಹಳ್ಳಿಗಳಿಗೆ ಎಷ್ಟು ವರ್ಷಗಳಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡುತ್ತೀರಿ ?

*Copies placed in the Mysore Legislative Library *vide* Nos. 2 dated 27-8-1973.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಇಷ್ಟು ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕು ಎಂದು ಒಂದು ಪ್ರೋಗ್ರಾಂ ಇದೆ. ಅದರಲ್ಲಿ ಯಾವ ಯಾವ ಹಳ್ಳಿಗಳಿಂದ ಏಳೂವರೆ ಪರ್ಸೆಂಟ್ ಉತ್ಪತ್ತಿ ವರ್ಕ್‌ಔಟ್ ಆಗುತ್ತದೆಯೋ ಅಂಥ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡುತ್ತೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ.—(ಆ) ಪ್ರಶ್ನೆಗೆ ಉತ್ತರವಾಗಿ, ಉಪ ವಿದ್ಯುತ್ ಪ್ರಸಹಕ ಮಾರ್ಗಗಳನ್ನು ಕೈಗೊಳ್ಳುವಂತೆ ಮಂಡಲಿಯವರಿಗೆ ತಿಳಿಸಲಾಗಿದೆ ಎಂದು ಹೇಳಿದ್ದೀರಿ, ಆ ಕೆಲಸವನ್ನು ಎಷ್ಟು ವರ್ಷದಲ್ಲಿ ಶುರು ಮಾಡುತ್ತೀರಿ, ಯಾವ ಸಾಲಿನಲ್ಲಿ ಅದನ್ನು ಮುಗಿಸಲಿಕ್ಕೆ ಸಾಧ್ಯವಾಗುತ್ತದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಈ ಯೋಚನೆಯನ್ನು ಸುಮಾರು 1,66,000 ರೂಪಾಯಿಗಳ ವೆಚ್ಚದಲ್ಲಿ 1641 ಕಿ. ಮೀ ಲೈನ್ ಡ್ರಾ ಮಾಡಬೇಕು, ಮತ್ತು ಇದನ್ನು ಎರಡು ವರ್ಷದಲ್ಲಿ ಮಾಡಬೇಕು ಎಂದು ಇದ್ದೇವೆ. ಎರಡು ವರ್ಷಗಳಲ್ಲಿ ಪೇಸ್ಡ್ ಪ್ರೋಗ್ರಾಂ ಹಾಕಿಕೊಂಡು ಕೆಲಸ ಮಾಡುತ್ತೇವೆ, ಮತ್ತು ಆ ಕೆಲಸವನ್ನು ಎರಡು ವರ್ಷಗಳಲ್ಲಿ ಪೂರೈಸಿಕೊಡುತ್ತೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ.—(ಸಿ) ಗೆ ಉತ್ತರವಾಗಿ, ಸಬ್ ಟ್ರಾನ್ಸ್‌ಮಿಷನ್ ಲೈನ್ ಮುಗಿದ ನಂತರ ಹಣವನ್ನು ಒದಗಿಸಿಕೊಂಡು ಅರಸೀಕೆರೆಯ ತಾಲ್ಲೂಕಿನ 50 ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸತಕ್ಕ ಯೋಜನೆ ಇದೆಯೆಂದು ಹೇಳಿದ್ದೀರಿ. ಆ 50 ಹಳ್ಳಿಗಳಿಗೆ ಎರಡು ವರ್ಷಗಳಲ್ಲಿ ವಿದ್ಯುಚ್ಛಕ್ತಿಯನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಬ್ ಟ್ರಾನ್ಸ್‌ಮಿಷನ್ ಲೈನ್ ಅನ್ನು ಎಳೆದು ಆದಮೇಲೆ 50 ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡಲಾಗುತ್ತದೆ. ಹಳ್ಳಿಯವರೂ ಕೂಡ ಅವರು ಮಾಡಬೇಕಾದಂಥ ಕಾರ್ಯವನ್ನು ಮಾಡಿ ಮುಂದೆ ಬಂದು, ಅವರಿಂದ ಏಳೂವರೆ ಪರ್ಸೆಂಟ್ ವರ್ಕ್‌ಔಟ್ ವ್ಯವಸ್ಥೆ ಆದರೆ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡುವುದಕ್ಕೆ ತಯಾರಾಗಿದ್ದೇವೆ.

ಶ್ರೀ ಟಿ. ಎಂ. ಮಂಜುನಾಥ.—ಏಳೂವರೆ ಪರ್ಸೆಂಟ್ ವರ್ಕ್‌ಔಟ್ ಆಗದೇ ಇದ್ದರೆ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದೀರಿ. ಏಳೂವರೆ ಪರ್ಸೆಂಟ್ ವರ್ಕ್‌ಔಟ್ ಆಗದೆ ಇದ್ದರೆ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುವುದಿಲ್ಲ ಎನ್ನುವುದು ಸರ್ಕಾರದ ಉದ್ದೇಶವೆ?

ಶ್ರೀ ಎಚ್. ಎಂ. ಚನ್ನಬಸಪ್ಪ— ಅಂಥ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಚ್. ಎಸ್. ಸಿದ್ದಪ್ಪ—ಹಳ್ಳಿಯವರು, ಅವರ ಕೆಲಸವನ್ನು ನಿರ್ವಹಿಸಿದರೆ ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆಂದು ಹೇಳಿದಿರಿ, ಅವರು ಏನು ಕೆಲಸವನ್ನು ನಿರ್ವಹಿಸಬೇಕು ಎಂದು ನಿಗದಿ ಮಾಡಿದ್ದೀರಿ?

ಶ್ರೀ ಎಚ್. ಎಂ. ಚನ್ನಬಸಪ್ಪ—ಸಭೆ ಪ್ರಾರಂಭವಾದಾಗ್ಗೆ ನಾನು ಒಂದು ನೋಟಿಫಿಕೇಷನ್ ಅನ್ನು ಎಲ್ಲರಿಗೂ ಕೊಟ್ಟೆ. ವಿದ್ಯುಚ್ಛಕ್ತಿಯನ್ನು ಒದಗಿಸಬೇಕಾದರೆ ಹಳ್ಳಿಯವರು ಏನು ಏನು ಕಾರ್ಯವನ್ನು ಮಾಡಬೇಕು ಎಂದು ಅಲ್ಲಿ ವಿಧಾಯಕವಾಗಿರತಕ್ಕ ರೀತಿಯಲ್ಲಿ ಅವರು ಕೆಲಸ ಮಾಡಬೇಕು. ಮೊದಲನೆಯದಾಗಿ ಅವರು ರೋಡ್ ಸರ್ವೆ ಫಾರಂ ಅನ್ನು ಫಿಲ್‌ಆಫ್ ಮಾಡಿ, ಇಷ್ಟು ಇಷ್ಟು ವಿದ್ಯುಚ್ಛಕ್ತಿ, ಇಂಥಿಂಥ ಕೆಲಸಕ್ಕೋಸ್ಕರ ತೆಗೆದುಕೊಳ್ಳುತ್ತೇವೆ ಎಂದು ಕೊಟ್ಟರೆ, ನಾವು ಅದರ ಅಂದಾಜನ್ನು ಲೆಕ್ಕ ಹಾಕಿ, ಎಷ್ಟು ಇನ್‌ವೆಸ್ಟ್‌ಮೆಂಟ್ ಆಗುತ್ತದೆ ಎಷ್ಟು ಉತ್ಪತ್ತಿ ಬರುತ್ತದೆ ಎನ್ನುವುದನ್ನು ನೋಡಿ, ಬಯಲು ಸೀಮೆಯಲ್ಲಿ ಏಳೂವರೆ ಪರ್ಸೆಂಟ್, ಮತ್ತು ಮಲೆನಾಡಿನಲ್ಲಿ ಐದು ಪರ್ಸೆಂಟ್, ಉತ್ಪತ್ತಿ ಬರುವುದಾದರೆ ಅಂಥಾದ್ದಕ್ಕೆ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡುತ್ತೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ—ತಾವು ಹೇಳಿದಂಥ ಕಾರ್ಯಗಳನ್ನು ಗ್ರಾಮಸ್ಥರು ಮಾಡಿ ಸುಮಾರು ಒಂದು ವರ್ಷವಾದರೂ ಕೂಡ, ಚೀಫ್ ಎಕ್ಸಿಕ್ಯೂಟಿವ್ ಆಫೀಸರ್ ಅವರು ಕಾಂಟರ್ ಸೈನ್ ಮಾಡಿ, ಇದು ವರೆಗೂ ವಿದ್ಯುಚ್ಛಕ್ತಿಯನ್ನು ಕೊಡದೆ ಇರುವ ಹಳ್ಳಿಗಳು ಇವೆ. ಇವುಗಳ ಬಗ್ಗೆ ತಾವು ತಕ್ಕ ಕ್ರಮಗಳನ್ನು ತೆಗೆದು ಕೊಳ್ಳುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ—ಅಂಥ ಕೇಸುಗಳು ಯಾವುದಾದರೂ ಇದ್ದರೆ ಮಾನ್ಯ ಸದಸ್ಯರು ನನ್ನ ಗಮನಕ್ಕೆ ತರಲಿ, ಆಗ ಅವ್ಯವಸ್ಥೆಗಳನ್ನು ಬಿಲೇ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.